ಸೃಜನಿ

SRUJANI: Indian Journal of Innovative Research and Development (SIJIRD)
Volume-5 Issue 3, July-August 2026, Pp. 141-144
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಬಿದರಹಳ್ಳಿ ನರಸಿಂಹಮೂರ್ತಿಯವರ ಕಥೆಗಳಲ್ಲಿಯ ತಾತ್ವಿಕತೆ

**ಡಾ. ಲೋಕೇಶ ಎಂ. ಆರ್**
ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಬಸವಾಪಟ್ಟಣ

***Abstract:***
*ಬಿದರಹಳ್ಳಿ ನರಸಿಂಹಮೂರ್ತಿಯವರ ಕಥೆಗಳಲ್ಲಿ ಮಾನವ ಬದುಕಿನ ವಿವಿಧ ಆಯಾಮಗಳನ್ನು ತಾತ್ವಿಕ ದೃಷ್ಟಿಕೋನದಿಂದ ಚಿತ್ರಿಸಿರುವುದು ಗಮನಾರ್ಹವಾಗಿದೆ. ಅವರ ಕಥೆಗಳಲ್ಲಿ ಜೀವನದ ಅರ್ಥ, ಮಾನವ ಸಂಬಂಧಗಳು, ಅಸ್ತಿತ್ವದ ಪ್ರಶ್ನೆಗಳು, ನೈತಿಕ ಮೌಲ್ಯಗಳು ಮತ್ತು ಮನುಷ್ಯನ ಆಂತರಿಕ ಸಂಘರ್ಷಗಳು ಪ್ರಮುಖವಾಗಿ ಮೂಡಿಬರುತ್ತವೆ. ಸಾಮಾಜಿಕ ವಾಸ್ತವದ ನೆಲೆಯಲ್ಲಿ ವ್ಯಕ್ತಿಯ ಸುಖ–ದುಃಖ, ಆಸೆ–ನಿರಾಸೆ ಹಾಗೂ ಬದುಕಿನ ಅನಿಶ್ಚಿತತೆಯನ್ನು ಲೇಖಕರು ಸೂಕ್ಷ್ಮವಾಗಿ ವಿಶ್ಲೇಷಿಸಿದ್ದಾರೆ. ಮಾನವೀಯತೆ, ಸತ್ಯ, ಪ್ರೀತಿ, ಕರ್ತವ್ಯ ಮತ್ತು ಬದುಕಿನ ಮೌಲ್ಯಗಳ ಕುರಿತು ಕಥೆಗಳು ಓದುಗರಲ್ಲಿ ಚಿಂತನೆಗೆ ಪ್ರೇರಣೆ ನೀಡುತ್ತವೆ. ಈ ಅಧ್ಯಯನವು ಬಿದರಹಳ್ಳಿ ನರಸಿಂಹಮೂರ್ತಿಯವರ ಕಥೆಗಳಲ್ಲಿ ವ್ಯಕ್ತವಾಗುವ ತಾತ್ವಿಕ ಚಿಂತನೆ, ಮಾನವೀಯ ಮೌಲ್ಯಗಳು ಮತ್ತು ಜೀವನದರ್ಶನವನ್ನು ವಿಶ್ಲೇಷಿಸುವ ಉದ್ದೇಶ ಹೊಂದಿದೆ.*

***Keywords:*** *ಬಿದರಹಳ್ಳಿ ನರಸಿಂಹಮೂರ್ತಿ, ತಾತ್ವಿಕತೆ, ಜೀವನದರ್ಶನ, ಮಾನವೀಯ ಮೌಲ್ಯಗಳು, ಅಸ್ತಿತ್ವವಾದ*

**ಪೀಠಿಕೆ**

ಬಿದರಹಳ್ಳಿ ನರಸಿಂಹಮೂರ್ತಿ ಅವರು ಬಹುಮುಖಿ ವ್ಯಕ್ತಿತ್ವದ ಒಬ್ಬ ಶ್ರೇಷ್ಠ ಕಥೆಗಾರರು. ಇವರು ನವ್ಯೋತ್ತರ ಕಾಲಘಟ್ಟದಲ್ಲಿ ಕಥೆ ಬರೆದರು. ಇವರು ಕಥೆ ಕಟ್ಟುವ ಪರಿ, ಭಾಷೆ ಮತ್ತು ನಿರೂಪಣೆ ಹಾಗೂ ಕಥೆಯಲ್ಲಿ ಒಡ ಮೂಡಿದ ತಾತ್ವಿಕತೆ ವಿಭಿನ್ನವಾದದು. ಇವರ 'ಶಿಶು ಕಂಡ ಕನಸು' 'ಹಂಸಹಾರಿತ್ತು' ಕಥಾಸಂಕಲನಗಳೆರಡು ಕನ್ನಡ ಸಾಹಿತ್ಯ ಅಕಾಡೆಮಿಯ ಪುಸ್ತಕ ಬಹುಮಾನ ಪಡೆದವುಗಳಾಗಿವೆ. ಇವರ ಶಿಶು ಕಂಡ ಕನಸು ಕಥಾ ಸಂಕಲನದ ಆರಂಭದ ಕಥೆಗಳು ದಲಿತ–ಬಂಡಾಯ ಚಳುವಳಿಯ ಪ್ರಭಾವವನ್ನು ಪಡೆದುಕೊಂಡು ರಚಿತವಾದ ಕಥೆಗಳಂತೆ ಕಂಡರೂ; ಕಥೆಗಳ ಹುಟ್ಟು ಮತ್ತು ತಾತ್ವಿಕತೆ ದಲಿತ–ಬಂಡಾಯ ಸಾಹಿತ್ಯದ ತಾತ್ವಿಕತೆಗಿಂತ ಭಿನ್ನವಾದುದು ಹಾಗೂ ಪಾರಂಪರಿಕವಾಗಿ ದತ್ತವಾದ ನೆಲ ಮೂಲದಿಂದ ಒಡಮೂಡಿದ ತಾತ್ವಿಕತೆಯಾಗಿದೆ. ಇವರ ಕಥೆಗಳು ಸ್ಥಳೀಯ ಪರಿಸರದಿಂದ ಒಡಮೂಡಿದವುಗಳಾಗಿರುವುದರಿಂದ ಸ್ಥಳೀಯತ್ವವನ್ನು ಹೇಳುತ್ತವೆ ಎಂದೆನಿಸಿದರೂ ಅವು ರಾಷ್ಟ್ರೀಯ ಭಾವೈಕ್ಯತೆಗಾಗಿ ಮಿಡಿಯುತ್ತವೆ ಎಂದೆನಿಸದಿರದು.

ಇವರ ಕಥಾ ಸಾಹಿತ್ಯವನ್ನು ಒಳಒಕ್ಕರೆ ನವ್ಯೋತ್ತರ ಕಾಲಘಟ್ಟದ ಚಿಂತನೆಗಳು ಮತ್ತು ಅನುಭವಗಳು ಎಲ್ಲರಿಗೂ ಒಂದೇ ರೀತಿಯಾಗಿ ದಕ್ಕಿದಂತವಲ್ಲ ಅವು ಪ್ರಾದೇಶಿಕವಾಗಿಯೂ ಭಿನ್ನವಾಗಿವೆ ಎಂಬುದು ಅರಿವಿಗೆ ಬಾರದೆ ಇರಲಾರದು. ಇವರ ಕಥೆಗಳು ಬದಲಾಗುತ್ತಿರುವ ಸನ್ನಿವೇಶ ಮತ್ತು ಸ್ಥಳಗಳಲ್ಲಿ

***Please cite this article as:*** ಲೋಕೇಶ, ಎಂ.ಆರ್. (2026). ಬಿದರಹಳ್ಳಿ ನರಸಿಂಹಮೂರ್ತಿಯವರ ಕಥೆಗಳಲ್ಲಿಯ ತಾತ್ವಿಕತೆ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್*, 5(3), 141–144

ಮನುಷ್ಯನ ಸ್ಥಾನಮಾನವೇನು ಎಂಬುದನ್ನು ಹುಡುಕುತ್ತವೆ. ಧಾರ್ಮಿಕ, ಸಾಂಸ್ಕೃತಿಕ, ಸಾಮಾಜಿಕ, ಮತ್ತು ರಾಜಕೀಯವಾದ ಏಕಕೇಂದ್ರಿತ ಚಿಂತನೆಗಳ ವಿರುದ್ಧ ಬಂಡೇಳುತ್ತವೆ ಹಾಗಾಗಿ ಇವರ ಕಥೆಗಳು ಏಕಕೇಂದ್ರಿತವಾಗಿರದೆ ಬಹುಕೇಂದ್ರೀತವಾಗಿವೆ. ಇವರ ಕಥಾ ನಿರೂಪಣೆಯು ಕೂಡ ಕೆಲವೊಮ್ಮೆ ಜನಪದ ಕಥನ ಮಾದರಿಯನ್ನು ಒಳಗೊಂಡು ಕಥೆಯೊಳಗಡೆ ಕಥೆಯನ್ನು ನೆನೆಯುವ ತಂತ್ರವನ್ನು ಒಳಗೊಂಡು ಏಕ ಕೇಂದ್ರೀತವಾಗಿರದೆ ಬಹು ಕೇಂದ್ರಗಳತ್ತ ಮುಖ ಮಾಡುತ್ತವೆ ಇವರ ಸೋಗಿಲ್ಲ ಚಂದ್ರ ಪಾಣಿ ಹೊನ್ನಾಳಿ ಹೊಡೆತ ಮುಂತಾದ ಕಥೆಗಳು ಈ ಹಿನ್ನೆಲೆಯಲ್ಲಿ ಗಮನಿಸಬಹುದು ಸಮಾಜ ಅಲ್ಲಿನ ಸಂಬಂಧಗಳು ಮನುಷ್ಯತ್ವದ ನೆಲೆಗಳು ಮುಖ್ಯವಾಗುತ್ತವೆ ಬಿದರಹಳ್ಳಿಯವರು ತಮ್ಮ ಕಥೆಗಳಲ್ಲಿ ಕಟ್ಟಿಕೊಡುವ ತಾತ್ವಿಕ ಸ್ವರೂಪ ಏಕೀಕೃತ ಭಾವದಿಂದ ಕೂಡಿರದೆ ತಮ್ಮ ಅನುಭವದಿಂದ ದಕ್ಕಿಸಿಕೊಂಡ ಬಹುಕೇಂದ್ರಿತ ಕಡೆಗೆ ಮುಖ ಮಾಡುತ್ತವೆ ಎಂದೆನಿಸುತ್ತದೆ.

ಅವರ ಕಥೆಗಳಲ್ಲಿ ಕೋಮು ಸೌಹಾರ್ದತೆ ಇದೆ! ತಾಯ್ತನದ ಹಂಬಲವಿದೆ! ಸಾಮಾಜಿಕ ಬದುಕಿನಲ್ಲಿ ಅನೇಕ ತಲ್ಲಣಗಳು ಏರ್ಪಟ್ಟಿವೆ; ಶಾಲೆಗಳ ಸ್ಥಾಪನೆಯಿಂದಾಗಿ ಹೊಸ ಅರಿವು ಮೂಡಿ ಉದಾರವಾದ ಚಿಂತನೆ ಮೂಡಿದೆ; ವಿಜ್ಞಾನದ ಆವಿಷ್ಕಾರದಿಂದಾಗಿ ಯಂತ್ರೋಪಕರಣಗಳು ಬಂದಿವೆ; ಧಾರ್ಮಿಕ ವ್ಯವಸ್ಥೆ ಅಲ್ಲೋಲಕಲ್ಲೋಲವಾಗಿದೆ; ದಾಯಾದಿ ಕಲಹ, ಸಣ್ಣತನ ನೀಚತನದಂತಹ ರಾಜಕೀಯ ವ್ಯವಸ್ಥೆ ತಲೆ ಎತ್ತಿದೆ; ಮೌಲ್ಯ ರಹಿತ ಮನುಷ್ಯರು ಹಾಗೂ ಮೌಲ್ಯ ಸಹಿತ ಮನುಷ್ಯರು ಕೂಡ ಇದ್ದಾರೆ. ಸ್ತ್ರೀಯರು ತಮ್ಮ ಸಣ್ಣತನದಿಂದಾಗಿ ಮೌಲ್ಯ ರಹಿತವಾಗಿಯೂ ಇನ್ನು ಕೆಲವು ಸ್ತ್ರೀಯರು ತಮ್ಮ ಉದಾತ್ತ ಗುಣಗಳಿಂದಾಗಿ ಮೌಲ್ಯ ಸಹಿತವಾಗಿಯೂ ಸಮೃದ್ಧರಾಗಿದ್ದು ತಮ್ಮ ಸ್ವತಂತ್ರವಾದ ವ್ಯಕ್ತಿತ್ವವನ್ನು ಕಟ್ಟಿಕೊಂಡಿದ್ದಾರೆ. ಹಳ್ಳಿಯ ಬದುಕು ಬದಲಾಯಿಸಿದೆ. ಅವರ ಕಥೆಗಳಲ್ಲಿಯ ಬದುಕು ಸ್ಥಗಿತ ನೆಲೆಯಿಂದ ಕೂಡಿರದೆ ಚಲನಶೀಲವಾಗಿದೆ. ಅವರು ತಮ್ಮ ಕತೆಗಳಲ್ಲಿ ಪರಿಹಾರವನ್ನು ಸಮಾಜದ ಸಂಕೀರ್ಣ ವ್ಯವಸ್ಥೆಯಿಂದಾಗಿ ಸೂಚಿಸದೆ ಸನ್ನಿವೇಶ ಬಲದಿಂದ ಸೂಚಿಸುವ ಸಂತನಂತೆ ಕಾಣುತ್ತಾರೆ. ಬಿದರಹಳ್ಳಿಯವರು ಇತರ ಕತೆಗಾರರು ನೋಡುವ ತಾತ್ವಿಕತೆಗಿಂತ ಭಿನ್ನವಾದ ನೆಲೆಯಲ್ಲಿ ನೋಡುತ್ತಾರೆ. ಬಿದರಹಳ್ಳಿಯವರು ಸಮಾಜವನ್ನು ನೋಡುವ ಪರಿ ವಿಶಿಷ್ಟ, ಜೀವ ರಕ್ಷಕ, ಶುದ್ಧ ಹಾಗೂ ಮಾನವೀಯ ಕಳಕಳಿಯಿಂದ ಕೂಡಿದ ಆತ್ಮೋದ್ಧಾರಕ ಸಮಾಜವನ್ನು ಕಾಣುವ ಹಂಬಲವುಳ್ಳದ್ದಾಗಿದೆ. ಈ ಮೇಲಿನ ಹೇಳಿಕೆಗಳನ್ನು ಅವರ ಬಿತ್ತಕ್ಕೆ ಬೇರಿನ ಚಿಂತೆ, ಹೊನ್ನಾಳಿ ಹೊಡ್ತ, ತಲೆ ಬಳಸುವ ಕಲೆ, ಸೋಗಿಲು, ಹಗೇವು, ಭಗವತಿ ಕಾಡು, ಗೆನ್ ಟಾ ಪೆನ್ನಿ ಅಂಥಹ ಕಥೆಗಳ ಹಿನ್ನೆಲೆಯಲ್ಲಿ ಗ್ರಹಿಸಬಹುದು ದಲಿತ–ಬಂಡಾಯ ಸಾಹಿತ್ಯದ ಪ್ರಭಾವದಿಂದಾಗಿ ಬಂಡಾಯ ದೋರಣೆಯನ್ನೊಯಳಗೊಂಡು ಬಂಡಾಯ ಸಾಹಿತ್ಯದ ತತ್ವ ಸಿದ್ಧಾಂತಗಳಿಗೆ ಕಟ್ಟುಬೀಳದೆ ಸಮಾಜದ ಸುಧಾರಣೆಗೆ ಯಾವುದೋ ಕ್ರಾಂತಿಯೋ, ಹೋರಾಟವೋ, ಸಿದ್ಧಾಂತವೋ ಮದ್ದು ಎನ್ನದೆ ಪರಂಪರೆಯ ಒಳಗೆ ಉತ್ತರಗಳನ್ನು ಹುಡುಕುವ ತತ್ವದ ಕಡೆಗೆ ಹೊರಡುತ್ತವೆ.

“ಇವತ್ತಿನ ದಲಿತ ಮತ್ತು ಬಂಡಾಯದ ಕಥೆಗಳು ಯಾವ ವಸ್ತುಗಳನ್ನು, ವಿಷಯಗಳನ್ನು, ಯಾವ ವಿಚಾರಗಳನ್ನು ಅಬ್ಬರದಲ್ಲಿ ಹೇಳತೊಡಗಿದೆಯೋ ಅಂತದ್ದೇ ಹಲವು ವಸ್ತು ವಿಚಾರಗಳು ಇಲ್ಲಿನ ಕಥೆಗಳ ಮೂಲ ದ್ರವ್ಯವಾಗಿವೆ ಒಳಗೊಂಡಿದ್ದರೂ ಅದರ ನಿರ್ವಹಣೆ ಹಾಗೂ ಅದು ಮುಂದಿಡುವ ಆಶಯದಲ್ಲಿ ಬೇರೆಯೇ ಆದ ನಿಲುವುಗಳನ್ನು ಈ ಕಥೆಗಳು ನಮ್ಮ ಮುಂದಿಡುತ್ತವೆ. ನರಸಿಂಹಮೂರ್ತಿಯವರು ಸಮಾಜದ ತಲ್ಲಣ, ನಾಗರಿಕತೆಯ ವಿಧ್ವಾಂಸಕ ಗುಣಗಳನ್ನು ಸಮಾಜದ ವಿಘಟನೆಗಳನ್ನು ಎಲ್ಲವನ್ನೂ ತಮ್ಮ ಕಥೆಗಳಲ್ಲಿ ಶೋಧಿಸಿದರೂ ಅವರು ಇದಕ್ಕೆಲ್ಲ ಮದ್ದು

ಕ್ರಾಂತಿಯೋ, ಸುಧಾರಣೆಯೋ, ಹೋರಾಟವೋ ಪರ್ಯಾಯವೆನ್ನದೆ ನಮ್ಮ ಪರಂಪರೆಯ ಒಳಗೆ ಇವುಗಳಿಗೆ ಉತ್ತರಗಳಿವೆ ಎಂಬ ಪಾರಂಪರಾಶ್ರದ್ಧಾ ಗುಣಗಳನ್ನು ಪ್ರಕಟಿಸುತ್ತಾರೆ." ಎಂಬ ಡಾ. ಪ್ರಹ್ಲಾದ ಅಗಸನ ಕಟ್ಟೆಯವರ ಮಾತುಗಳು ಬಿದರಹಳ್ಳಿ ಅವರ ಒಟ್ಟು ಕಥೆಗಳ ತಾತ್ವಿಕತೆಯನ್ನು ನಮಗೆ ಪರಿಚಯ ಮಾಡಿಕೊಡುತ್ತವೆ. ಬಿದರಹಳ್ಳಿಯವರ ಕಥೆಗಳು ದಲಿತ ಬಂಡಾಯ ಕಾಲಘಟ್ಟದ ಕಥೆಗಳಾಗಿದ್ದರೂ ತಾತ್ವಿಕತೆ ಮತ್ತು ಧೋರಣೆಯಲ್ಲಿ ಭಿನ್ನ ಮತ್ತು ಆದರ್ಶದಾಯಕವಾಗಿವೆ. ಹಾಗೆಯೇ ಪ್ರಾದೇಶಿಕವಾಗಿ ಭಿನ್ನವಾಗಿವೆ. 'ತಲೆ ಬಳಸುವ ಕಲೆ' ಕಥೆಯು ಬಂಡಾಯದ ವಸ್ತು ವಿಷಯವನ್ನು ಒಳಗೊಂಡಿದ್ದು ಈಗಾಗಲೇ ಸಿದ್ಧವಾದ ಬಂಡಾಯದ ಮಾದರಿಯನ್ನು ಮೀರುತ್ತಲೇ ನಮ್ಮಮುಂದೆ ಹೊಸ ಸಾಧ್ಯತೆಗಳನ್ನು ಇಡುತ್ತದೆ. ಬಂಡೆಪ್ಪನ ಮಗ ಕರಿಬಸಪ್ಪ ಅಪ್ಪನಂತೆ ತನ್ನ ಮೂಲ ಪರಂಪರೆಯಿಂದ ಬಂದ ತಾತ್ವಿಕತೆಯನ್ನು ಹೊಸ ಶಿಕ್ಷಣ ವ್ಯವಸ್ಥೆಯಿಂದ ಪಡೆದುಕೊಂಡ ಜ್ಞಾನ ಮತ್ತು ಅರಿವಿನ ಮೂಲಕ ತಲೆಯನ್ನು ಬಳಸಿ ಪಾರಂಪರಿಕವಾಗಿ ಬಂದ ಜ್ಞಾನವನ್ನು ಮೀರುವುದರ ಮೂಲಕ ಆದರ್ಶಮಯವಾದ ವ್ಯಕ್ತಿತ್ವವನ್ನು ಕಟ್ಟಿಕೊಳ್ಳುತ್ತಾನೆ. ಇದು ಸಂಪೂರ್ಣ ಬಂಡಾಯ ಧೋರಣೆಗಿಂತ ಭಿನ್ನವಾದ ಸಾತ್ವಿಕತೆಯಿಂದ ಕೂಡಿದ್ದಾಗಿದೆ.

'ಬಿತ್ತಕ್ಕೆ ಬೇರಿನ ಚಿಂತೆ' ಕತೆ ಆಧುನಿಕತೆಯಿಂದ ಬಂದ ವ್ಯಾವಹಾರಿಕವಾದ ಮತ್ತು ಯಾಂತ್ರಿಕವಾದ ಬದುಕನ್ನು ಶೋಧಿಸುತ್ತಲೇ ಅದರ ಆಚೆಗಿನ ನೆಲಮೂಲದ ಅರಿವಿನ ಸಂಬಂಧದ ಗಟ್ಟಿತನವನ್ನು ಪರಿಚಯಿಸುತ್ತದೆ. ಸಂಪ್ರದಾಯಬದ್ಧ ವೈದಿಕ ಕುಟುಂಬದಲ್ಲಿ ಜನಿಸಿದಿರೂ ಅದಕ್ಕೆ ಅಂಟಿಕೊಳ್ಳದ ಅಜ್ಜ ಪರಂಪರಾಗತವಾಗಿ ಬಂದ ಡಾಳು ಡಾಳಾದ ಧರ್ಮ–ಕರ್ಮ, ಮುಟ್ಟು–ಚಟ್ಟು, ಮಡಿ–ಮೈಲಿಗೆ, ಸಂಪ್ರದಾಯಗಳನ್ನು ಮೀರಿ ನಿಸರ್ಗ ಸಹಜವಾದ ದರ್ಮವನ್ನು ಅಪ್ಪಿಕೊಂಡು ಬದುಕುವ ಅಜ್ಜ ಮೊಮ್ಮಗನಿದ್ದಾನೆ. ಸಂಪ್ರದಾಯವನ್ನು ಚಾಚೂ ತಪ್ಪದೆ ಪಾಲಿಸುವ ಅಣ್ಣನ ಮಕ್ಕಳು ಇದ್ದಾರೆ ಇವೆಲ್ಲವೂ ಗಳಿಂದ ಬಿಡುಗಡೆ ಬಯಸುವ ಅಜ್ಜನ ಮೊಮ್ಮಗ ಅಜ್ಜಿ ಸತ್ತ ಮೇಲೆ ಮಡಿವಂತ ಕುಟುಂಬದ ಅಜ್ಜಿಯ ಬಗ್ಗೆ ಚಿಂತಿಸುತ್ತಾ ಅಜ್ಜಿಯ ತಲೆ ಬೋಳಿಸಿಕೊಳ್ಳುವ ಸ್ಥಿತಿಯನ್ನು ನೆನೆದು ಇಂತಹ ಶೋಷಣೆಯ ವಿರುದ್ಧ ಸಿಡಿದೇಳುತ್ತಾನೆ. ಇದಕ್ಕಿಂತ ಸಹಗಮನ ಪದ್ದತಿಯೇ ಒಳ್ಳೆಯದಿತ್ತು ಎನ್ನುತ್ತಾನೆ. ಮಾನವತೆಯ ಕುತ್ತಿಗೆ ಹಿಚುಕುವ ದೌರ್ಜನ್ಯದ ವಿರುದ್ಧ ಮೊಮ್ಮಗ ಕಥೆಯ ಉದ್ದಕ್ಕೂ ಸಿಡಿದೇಳುತ್ತಾನೆ. ಅಜ್ಜನ ಘನವಾದ, ಪರಿಪೂರ್ಣ ವ್ಯಕ್ತಿತ್ವದ ಸಾವಿನಿಂದಾಗಿ ಮೊಮ್ಮಗನಿಗೆ ಬಿಡುಗಡೆ ದೊರಕಿದಂತಾಗುತ್ತದೆ.

'ಜಾತಿ ಸಾಯುವ ಹೊತ್ತು' ಕಥೆ ಪೂರ್ಣ ಲೇಖಕನ ಆದರ್ಶವನ್ನೇ ಆದರಿಸಿ ಬರೆದ ಕಥೆಯಾದ್ದರಿಂದ ಸಿದ್ದ ವಿಚಾರಗಳಿಗೆ ತಕ್ಕಂತೆ ಕಥೆಗಳು, ಪಾತ್ರಗಳು, ಸಂಭಾಷಣೆಗಳು ಒದಗಿ ಬರುತ್ತವೆ. ಯಾವುದೇ ಸಿದ್ಧಾಂತಗಳಿಗೆ ಕಥಾ ಮಾದರಿಗಳಿಗೆ ಜೋತುಬೀಳದೆ ಹೊಸ ಆಲೋಚನಾ ಕ್ರಮವನ್ನು ಹಾಗೂ ತಾತ್ವಿಕತೆಯನ್ನು ನೀಡುತ್ತಾರೆ. ಸಾಮಾಜಿಕ ಸಮಸ್ಯೆಗಳ ಸಂಕೀರ್ಣ ಕಥೆಗಳಿಗಿಂತ ಸಮಸ್ಯೆಗಳು ಪರಿಹಾರದತ್ತ ಅವರ ಕಥೆಗಳು ಓಡುತ್ತವೆ. ಬಿದರಹಳ್ಳಿಯವರು ಕಥೆಗಿಟ್ಟ ಹೊನ್ನಾಳಿ ಹೊಡ್ತ: ಹೆಸರೇ ಸಚಿಸುವಂತೆ ಹೊನ್ನಾಳಿ ಪ್ರದೇಶದ ವಿಶಿಷ್ಟವಾದ ಚರಿತ್ರೆಯನ್ನು ತಿಳಿಸುತ್ತದೆ. ಹೊನ್ನಾಳಿ ಹೊಡ್ತ ಎಂಬ ನುಡಿಗಟ್ಟು ಈಗಾಗಲೇ ಕುವೆಂಪುರವರ ಮಲೆಗಳಲ್ಲಿ ಮದುಮಗಳು ಕಾದಂಬರಿಯಲ್ಲಿಯೂ ಬಂದಿದ್ದು ಅದಕ್ಕೆ ಅವರು ಕೊಡುವ ಅರ್ಥಬೇರೆ ಆಳುಗಳು ತಪ್ಪಿಸಿಕೊಂಡಾಗ ಹಿಡಿದು ಸಾಲ ಮಸೂಲಿ ಮಾಡಲು ಹೊನ್ನಾಳಿ ಸಾಬರನ್ನು ಹೊಡೆಯಲು ನೇಮಿಸುತ್ತಿದ್ದರಂತೆ– ಹೊಡೆಯುತ್ತಿದ್ದ ಎಂಬ ಅರ್ಥಬಂದಿದೆ. ಆದರೆ ಸ್ಥಳೀಯ ಜನರು ನೀಡುವ ಅರ್ಥವೂ ಭಿನ್ನವಾಗಿದೆ ಅಷ್ಟಲ್ಲದೆ ಕುಸ್ತಿಪಟಗಳು ನೀಡುವ ಅರ್ಥ ಭಿನ್ನವಾಗಿದೆ. ಆದರೆ ಬಿದರಳ್ಳಿಯವರು ಇದಕ್ಕೆ ಇನ್ನು

ಉದಾತ್ತವಾದ ಅರ್ಥವನ್ನು ನೀಡಿ ಅವರ ಕಥೆಯಲ್ಲಿ ಉದಾತ್ತ ಸಂಸ್ಕೃತಿಯಿಂದ ಕೂಡಿದ್ದು ಎಂಬ ಹೊಸ ತಾತ್ವಿಕ ಅರ್ಥವನ್ನು ನೀಡಿ ಆಶಯ ಮಟ್ಟದಲ್ಲಿ ತಂದಿದ್ದಾರೆ. ಕಥೆಯು ಮಾರಿ ಹಬ್ಬದ ಜಾತ್ರೆಯೊಂದಿಗೆ ಪ್ರಾರಂಭವಾಗಿ ಗ್ರಾಮೀಣ ಆಟಗಳು ಕೋಮು ಸೌಹಾರ್ದಯುತವಾಗಿ ನಡೆಯುತ್ತಿದ್ದವು. ರಾಜಕೀಯದ ಪ್ರವೇಶದಿಂದಾಗಿ ಕೋಮು ಸಂಘರ್ಷಕ್ಕೆಡೆಮಾಡಿಕೊಟ್ಟಿರುವುದನ್ನು ಕಥೆ ಶೋಧಿಸುತ್ತದೆ. ಗರಡಿಯಾಳು ಪೈಲ್ವಾನ್ ಕೆಂಚಪ್ಪನ ಉದಾತ್ತ ವ್ಯಕ್ತಿತ್ವದಿಂದಾಗಿ ಭೂಮಿಗೆ ಸೀಮಿಲ್ಲ ಎಂಬ ಉದಾತ ತತ್ವದಿಂದಾಗಿ ಕೆಂಚಪ್ಪ ಹಬ್ಬದ ಚರಗವನ್ನು ಉಗುತ್ತಾ ಧಾರವಾಡ ಸೀಮೆಯವನೊಬ್ಬ ಚರಗವನ್ನು ಕದ್ದೊಯ್ಯುವಾಗ ಅವರನ್ನು ಹಿಡಿದು ಕೊನೆಗೆ ಶಿವನ ಪ್ರೇರಣೆಯಾದವನಂತೆ ಚರಗವನ್ನು ಎಂಟು ದಿಕ್ಕಿಗೆ ಎಸೆದು ಉದಾತ್ತನಾಗುತ್ತಾನೆ. ಆದರೆ ಊರಿನ ಜನರು ಕೆಂಚಪ್ಪನಿಂದ ತಲತಲಾಂತರದಿಂದ ನಂಬಿಕೊಂಡ ಬಂದ ನಂಬಿಕೆಗಳಿಗೆ ಅಪಚಾರವಾಯಿತು ಎಂದು ಬಗೆದು ಅವನಿಗೆ ಅನ್ನ ನೀರು ಕೊಡದೆ ಮಾತನಾಡಿಸದೆ ಹುಚ್ಚು ಹಿಡಿಯುವಂತೆ ಮಾಡುತ್ತಾರೆ. ಹಳ್ಳಿಯಲ್ಲಿ ನಡೆಯುವ ಎಲ್ಲಾ ಹಾಗುಹೋಗುಗಳಿಗೆ ದೈವವೇ ಕಾರಣ ಎಂದು ನಂಬುವ ಮುಗ್ಧ ಜನ ಸಮುದಾಯವಿದ್ದು ಅಂಧರಾಗೆ ಕೆಲವು ನಂಬಿಕೆಗಳನ್ನು ನಂಬುವ ಕೆಲವು ಕ್ಷುಲ್ಲಕ ಮನಸುಗಳು ಕೆಂಚಪ್ಪನಂತಹ ಉದಾತ್ತವಾದ ದಾರ್ಶನಿಕತೆಯನ್ನು ಅರ್ಥ ಮಾಡಿಕೊಳ್ಳದೆ ಹೋದದ್ದು ವಿಪರ್ಯಾಸವಾಗಿದೆ. ಬೀರಜ್ಜನ ಮೂಲಕ ಕಥೆ ಹೇಳಿಸಿ ಸಮಕಾಲೀನ ಸಾಮಾಜಿಕ, ಸಾಂಸ್ಕೃತಿಕ ಪ್ರಜ್ಞೆಯನ್ನು, ತಾತ್ವಿಕತೆಯನ್ನು ಯುವ ಪೀಳಿಗೆಯಲ್ಲಿ ಮೂಡಿಸುವಂತಹ ಕೆಲಸವನ್ನು ಬಿದರಳ್ಳಿಯವರು ತಮ್ಮ ಕಥೆಗಳಲ್ಲಿಲ್ಲಿ ಪ್ರಾದೇಶಿಕ ಭಾಷೆಯ ಸಮೃದ್ಧತೆಯೊಂದಿಗೆ ವೈಶಿಷ್ಟ ಪೂರ್ಣವಾಗಿ ಕಟ್ಟಿಕೊಟ್ಟಿದ್ದಾರೆ.

**ಪರಾಮರ್ಶನ ಗ್ರಂಥಗಳು**


- ಬಿದರಹಳ್ಳಿ ನರಸಿಂಹಮೂರ್ತಿ. (2005). *ಶಿಶು ಕಂಡ ಕನಸು.* ಸಿವಿಜಿ ಪ್ರಕಾಶನ.
- ಬಿದರಹಳ್ಳಿ ನರಸಿಂಹಮೂರ್ತಿ. (2010). *ಹಂಸಹಾರಿತ್ತು.* ಪ್ರಿಯದರ್ಶಿನಿ ಪ್ರಕಾಶನ.
- ಚೆನ್ನೇಶ್. (2015). *ಹೊನ್ನಾಳಿ ಸೀಮೆಯ ಕಥನ ಸಾಹಿತ್ಯ.* ಗೀತಾಂಜಲಿ ಪ್ರಕಾಶನ.
- ಪ್ರಹ್ಲಾದ ಅಗಸನ ಕಟ್ಟೆ. (2004). *ಕಳಕಳಿ.* ಕಣ್ವ ಪಬ್ಲಿಕೇಶನ್.
- ಕರಿಗೌಡ ಬೀಚನಹಳ್ಳಿ. (2011). *ಶತಮಾನದ ಸಣ್ಣ ಕಥೆಗಳ ಸಮೀಕ್ಷೆ.* ಕರ್ನಾಟಕ ಸಾಹಿತ್ಯ ಅಕಾಡೆಮಿ.